Medical College ಗಳು de-recognize ಆಗಲಿಕ್ಕೆ ಬಂದಿರತಕ್ಕಂಥದ್ದು ಸುದ್ಧಿ ತಮಗೆ ಗೊತ್ತಿದೆ. ಅಲ್ಲಿರತಕ್ಕಂಥ intake strength 200 ಇದ್ದದ್ದು 100 ಕ್ಕೆ ಇಳಿದಿದೆ. ಕೆಲವು ಕಡೆ 50 ಕ್ಕೂ ಇಳಿದಿರತಕ್ಕಂಥ ಉದಾಹರಣೆ ತಮಗೆ ಗೊತ್ತಿದೆ. ನೀವು ಯಾವ ರೀತಿ ಅವುಗಳನ್ನು ನಿರ್ವಹಣೆ ಮಾಡುತ್ತಿದ್ದೀರಿ ಎನ್ನತಕ್ಕಂಥದ್ದರ ಆತ್ಮಾವಲೋಕನವನ್ನು ಇವತ್ತು ನೀವು ಮಾಡಿಕೊಳ್ಳಬೇಕಾಗುತ್ತದೆ. ಹೊಸ ಕಾಲೇಜು ತೆಗೆಯುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ತೆಗೆದಿರತಕ್ಕಂಥ ಕಾಲೇಜುಗಳಲ್ಲಿ intake strength ಕಡಿಮೆ ಆಗುತ್ತಿರವುದಕ್ಕೆ ಸರ್ಕಾರದಲ್ಲಿ ಎಲ್ಲಾದರೂ ಲೋಪದೋಷ ಇದೆಯೆನ್ನತಕ್ಕಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ, ಎಂದು ನಾನು ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಎರಡನೇಯದು, ಈ Trust Actನ್ನು ಈಗ ನೀವು ನೋಡಿದಿರಿ co-operative Actನಲ್ಲಿ ಆ Trust Member ಮಾತ್ರ ಕೇಳಲಿಕ್ಕೆ ಅವಕಾಶವಿದೆ. ಆ ಟ್ರಸ್ಟ್ ಮೆಂಬರ್ ಬಿಟ್ಟು ಯಾರಾದರೂ ಪಬ್ಲಿಕ್ ಆ ಟ್ರಸ್ಟ್‌ನಲ್ಲಿ ನಡೆಯುತ್ತಿರತಕ್ಕಂಥ ಲೆಕ್ಕ ಪತ್ರಗಳ ಪರಿಶೋಧನೆ ಬಗ್ಗೆ ಕೇಳಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡುತ್ತೀರಾ ಅಂತ ಹೇಳಿ ತಮ್ಮ ಮುಖಾಂತರ ನಾನು ಕೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಅದಕ್ಕೆ ಹೇಳಬೇಕು ಸಾರ್. ಟ್ರಸ್ಟ್‌ಗಳೇನಾಗಿವೆ family trust ಗಳಾಗಿವೆ. They will be totally family members. ಅಪ್ಪ ಇರುತ್ತಾನೆ, ಮಗ ಇರುತ್ತಾನೆ, ಮೊಮ್ಮಗ ಇರುತ್ತಾನೆ. There won't be any public in the trust. That they have to specify. ನಾನು ಅದನ್ನೇ ಕೇಳಬೇಕೂಂತ ಇರುವುದು.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ಒಂದು ಕ್ಲಾರಿಫಿಕೇಷನ್ ಇದೆ.

ಉಪಾಧ್ಯಕ್ಷರು : ಬೇಡ, ಬೇಡ, 1–2 ಕ್ಲಾರಿಫಿಕೇಷನ್ ಅಷ್ಟೇನೆ..... ಅವಕಾಶವಿಲ್ಲ.

(ಇ) **ವಿಷಯ : ಮುಧೋಳ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ 2004 ರಲ್ಲಿ ತೊಟ್ಟಿ ಕುಸಿದು ಮೃತಪಟ್ಟ ಮತ್ತು ಅಂಗವಿಕಲರಾದವರ ಕುಟುಂಬದವರಿಗೆ ಪರಿಹಾರ ನೀಡುವುದರ ಬಗ್ಗೆ.**

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಉಪಾಧ್ಯಕ್ಷರೆ, ಕಳೆದ ವರ್ಷ ಏಪ್ರೀಲ್ 19ನೇ ತಾರೀಖು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ ನೀರಿನ ಟ್ಯಾಂಕ್ ಕುಸಿದು ಇಬ್ಬರು ಮಹಿಳೆಯರು ಸತ್ತರು. ಒಬ್ಬರು ಕೈಕಾಲು ಮುರಿದುಕೊಂಡು ಅಂಗವಿಕಲರಾದರು. ಅವರಿಗೆ ಪರಿಹಾರ ಕೊಡಬೇಕೆಂದು ಹೇಳಿ ನಾನು ಸರ್ಕಾರಕ್ಕೆ ವಿನಂತಿ ಮಾಡಿ ತಮ್ಮ ಮೂಲಕ ಒಂದು ನೋಟೀಸ್ ಅನ್ನು ಕಳುಹಿಸಿದ್ದೇನೆ. ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ಯಾರ್ಯಾರು ಇನ್‌ವಾಲ್ವ್ಡ್ ಆಗಿದ್ದಾರೆ, ಅವರ ಮೇಲೆ ಎನ್‌ಕ್ವಯರಿ ಮಾಡುತ್ತೇವೆ, ಲೋಕಾಯುಕ್ತಕ್ಕೆ ಹಾಕುತ್ತೇವೆ.....

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಉತ್ತರ ಹೇಳಲಿ.

ಉಪಾಧ್ಯಕ್ಷರು : ನಿಮ್ಮ ಪ್ರಶ್ನೆ ಆಯಿತಲ್ಲ ಕಾರಜೋಳರವರೆ, ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ) : ಬಾಗಲಕೋಟೆ ಜಿಲ್ಲೆಯ ಮುಧೋಳ್ ತಾಲ್ಲೂಕಿನ ನಾಗರಾಳ ಗ್ರಾಮದಲ್ಲಿ ದಿನಾಂಕ 19-04-2004 ರಂದು ನೀರಿನ ತೊಟ್ಟಿ ಕುಸಿದು ಇಬ್ಬರು ಹೆಂಗಸರು ಮೃತಪಟ್ಟಿರುತ್ತಾರೆ. ಅಲ್ಲದೇ ಒಬ್ಬ ಹುಡುಗಿ ಅಂಗವಿಕಲರಾಗಿರುತ್ತಾಳೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರು ತಮ್ಮ ಪತ್ರ ದಿನಾಂಕ 27-04-2004 ರಲ್ಲಿ ಈ ಘಟನೆಯ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಅದರ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ನಾಗರಾಳ ಗ್ರಾಮ ಪಂಚಾಯಿತಿ ವತಿಯಿಂದ ಕಟ್ಟಲಾದ ನೀರಿನ ತೊಟ್ಟಿ ಕುಸಿದಿದ್ದ ರಿಂದಾಗಿ ಈ ದುರ್ಘಟನೆ ನಡೆದಿದೆ. ಈ ದುರ್ಘಟನೆಗೆ ಕೆಳಗೆ ತಿಳಿಸಲಾದ ನೌಕರರು ಜವಾಬ್ದಾರರಾಗಿರುತ್ತಾರೆಂದು ವರದಿಯಲ್ಲಿ ತಿಳಿಸಲಾಗಿದೆ. ಇದಲ್ಲದೆ ಕಳಪೆ ಕಾಮಗಾರಿಗಾಗಿ ಗುತ್ತಿಗೆದಾರರು ಕೂಡ ಜವಾಬ್ದಾರರಾಗಿರುತ್ತಾರೆ.

1) ಗ್ರಾಮ ಪಂಚಾಯತಿ ಕಾರ್ಯದರ್ಶಿ,

2) ಕಿರಿಯ ಇಂಜಿನಿಯರ್,

3) ಗ್ರಾಮ ಪಂಚಾಯತಿ ಅಧ್ಯಕ್ಷರು,

4) ದಿನಗೂಲಿ ನೌಕರ ಹಾಗೂ ಬಿಲ್ ಕಲೆಕ್ಟರ್,

5) ಗುತ್ತಿಗೆದಾರರು(ಶ್ರೀ ಧರ್ಮಣ್ಣ ಪರಸಪ್ಪ ಗಿರೆವ್ವಗೋಳ)

ಎಂ.ಎಂ. ಕಲ್ಯಾಣ ಶೆಟ್ಟಿ : ಗ್ರಾಮ ಪಂಚಾಯತಿ ಕಾರ್ಯದರ್ಶಿ, ಶ್ರೀ ಅಡಿಯನ್, ಶ್ರೀ ಮಿಟ್ಲಕೋಡ್, ಕಿರಿಯ ಇಂಜಿನಿಯರ್, ಇವರುಗಳನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರು ಇಲಾಖಾ ವಿಚಾರಣೆ ಬಾಕಿ ಇಟ್ಟು ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ. ಈ ಘಟನೆಯಿಂದ ತೊಂದರೆಗೊಳಗಾದ ಜನರಿಗೆ ಪ್ರಕೃತಿ ವಿಕೋಪದಿಂದ ಉಂಟಾದ ಘಟನೆಗಳಡಿಯಲ್ಲಿ ಪರಿಹಾರ ನೀಡುವಂತೆ ಈ ಪ್ರಕರಣದಲ್ಲಿ ಪರಿಹಾರ ನೀಡಲು ಸಾಧ್ಯವಾಗುವುದಿಲ್ಲ. ಕಂದಾಯ ಇಲಾಖೆಯ ವತಿಯಿಂದಾಗಲೀ ಅಥವಾ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯಡಿಯಲ್ಲಿನ ಸೆಕ್ಷನ್ 193 ರ ಪ್ರಕಾರ ಪರಿಹಾರಧನಕ್ಕೆ ಇವರುಗಳು ಅರ್ಹರಿರುವುದಿಲ್ಲ.

ಈ ಘಟನೆಯಿಂದ ತೊಂದರೆಗೊಳಗಾದ ಹಾಗೂ ಮೃತರಾದ ವ್ಯಕ್ತಿಗಳಿಗೆ ನೀಡುವ ಪರಿಹಾರವು ಈ ಘಟನೆಗೆ ನೇರವಾಗಿ ಜವಾಬ್ದಾರರಾದಂತ ಸಿಬ್ಬಂದಿಗಳಿಂದ ಮತ್ತು ಗುತ್ತಿಗೆದಾರರಿಂದ ವಸೂಲಿ ಮಾಡುವಂತಹ ಪ್ರಕರಣವಾಗಿರುತ್ತದೆ. ಆದ್ದರಿಂದ ಕರ್ನಾಟಕ ಲೋಕಾಯುಕ್ತ ವತಿಯಿಂದ ವಿಚಾರಣೆಗೆ ಅದೇಶಿಸಲಾಗುವುದು. ಇದಲ್ಲದೇ ಈ ಘಟನೆಯಿಂದ ಮೃತರಾದ ಇಬ್ಬರು ಹೆಂಗಸರಿಗೆ ತಲಾ ರೂ.25000–00 ಹಾಗೂ ಅಂಗವಿಕಲರಾದಂತಹ ಹೆಣ್ಣು ಮಗುವಿಗೆ ತಲಾ ರೂ.10,000–00 ತಾತ್ಕಾಲಿಕ ಪರಿಹಾರವನ್ನು ನೀಡಲು ಸರ್ಕಾರವು ವಿಶೇಷವಾಗಿ ಕ್ರಮ ಕೈಗೊಳ್ಳುವುದು.

ಈ ಮೇಲೆ ತಿಳಿಸಿದ ದುರ್ಘಟನೆಯು ಲೋಕಾಯುಕ್ತರಿಂದ ವಿವರವಾದ ವಿಚಾರಣೆ ನಡೆಸಿದ ನಂತರ ದುರ್ಘಟನೆಗೆ ಕಾರಣರಾದ ನೌಕರರಿಂದ ಹಾಗೂ ಇನ್ನುಳಿದ ವ್ಯಕ್ತಿಗಳಿಂದ ಪರಿಹಾರದ ಮೊತ್ತವನ್ನು ತೊಂದರೆಗೊಳಗಾದವರಿಗೆ ಹಾಗೂ ಮೃತರ ಉತ್ತರ ಜೀವಿಗಳಿಗೆ (ಅವಲಂಬಿತರಿಗೆ) ಪಾವತಿ ಮಾಡುವ ಬಗ್ಗೆ ಪರಿಶೀಲಿಸಿ ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಗೋವಿಂದ ಎಂ.ಕಾರಜೋಳ : ನಾನು ಸರ್ಕಾರಕ್ಕೆ ಕೇಳಿದ್ದೆ. 19.04.2004 ರಂದು ನಾಗರಾಳ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಆರ್ ಡಿ ಪಿ ಆರ್ ಇಲಾಖೆಗೆ ಸಂಬಂಧ ಪಟ್ಟ ಗ್ರಾಮ ಪಂಚಾಯತ್‌ಗೆ ಸೇರಿದ ನೀರಿನ ಟ್ಯಾಂಕ್ ಕುಸಿದು ಇಬ್ಬರು ಹೆಣ್ಣು ಮಕ್ಕಳು ಸತ್ತಿದ್ದಾರೆ ಮತ್ತು ಒಬ್ಬರು

ಅಂಗವಿಕಲರಾಗಿದ್ದಾರೆ. ಸತ್ತವರ ಹೆಸರು ಸುವರ್ಣ ಕಲ್ಲಪ್ಪ ಮಹಾಲಿಂಗಪುರ್, ರೇಣುಕಾ ಶಂಕ್ರಪ್ಪ ಗೋರೋ, ಅಂಗವಿಕಲರಾದವರು ಶೈಲಾ ಕಲ್ಲಪ್ಪ ಮತ್ತು ಮಹಾಲಿಂಗಪುರ್. ಇವರೆಲ್ಲ ಬಡ ಕುಟುಂಬದಿಂದ ಬಂದಂಥವರು. ಬಟ್ಟೆ ತೊಳೆಯಲಿಕ್ಕೆ ಹೋಗಿ ಅಲ್ಲಿ ಸಿಕ್ಕಿಹಾಕಿಕೊಂಡು ಸತ್ತವರು. ಸರ್ಕಾರದ ಕಳಪೆ ಕಾಮಗಾರಿಯಿಂದ ಇವತ್ತು ನೀರಿನ ಟ್ಯಾಂಕ್ ಕುಸಿದಿದೆ. ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾನೂನಿನಡಿಯಲ್ಲಿ ಬರುವುದಿಲ್ಲ, ಆ ಕಾನೂನಿನಡಿಯಲ್ಲಿ ಬರುವುದಿಲ್ಲ ಎಂದು ಹೇಳಲಿಕ್ಕೆ ಸರ್ಕಾರ ಏಕೆ? ಸರ್ಕಾರವಿರುವುದು, ಜನರಿಗೆ ಅನುಕೂಲ ಮಾಡಿಕೊಡಲಿಕ್ಕಾಗಿ. ಕಾನೂನು ಇರುವುದು ಜನರಿಗೆ ಅನುಕೂಲ ಮಾಡಿಕೊಡಲಿಕ್ಕಾಗಿ. ಇವತ್ತು ಸತ್ತವರಿಗೆ ನಾವು 25000 ರೂಪಾಯಿ ಕೊಡುತ್ತೇವೆಂದರೆ, ಅದು ಶವಸಂಸ್ಕಾರಕ್ಕೂ ಕೂಡ ಆಗುವುದಿಲ್ಲ. ಮಂತ್ರಿಗಳಿಗೆ ಬಹುಶ: ಕಟ್ಟಿಗೆ ರೇಟ್ ಗೊತ್ತಿರಲಿಕ್ಕಿಲ್ಲ. ಹೆಣ ಸುಡಬೇಕೆಂದರೆ ಎಷ್ಟು ಖರ್ಚು ಬರುತ್ತದೆಂದು ತಿಳಿಯಬೇಕು. ಸರ್ಕಾರದಿಂದ ನಾನು ಈ ಉತ್ತರವನ್ನು ನಿರೀಕ್ಷೆ ಮಾಡಿಲ್ಲ. ಇವತ್ತಿಗೆ ಒಂದು ವರ್ಷವಾಯಿತು. ಒಂದು ವರ್ಷದ ನಂತರ ನಾವು ಲೋಕಾಯುಕ್ತಕ್ಕೆ ತನಿಖೆ ಮಾಡಲು ಅದೇಶ ಮಾಡುತ್ತೇವೆ, ಬಂದ ನಂತರ, ಕ್ರಮ ತೆಗೆದುಕೊಳ್ಳುತ್ತೆವೆಂದು ಹೇಳುತ್ತಾರೆ. ಇನ್ನೊಂದು ಏನು ಹೇಳುತ್ತಾರೆಂದರೆ, ಗುತ್ತಿಗೆದಾರರು ಮತ್ತು ಇಂಜಿನಿಯರ್‌ರಿಂದ ವಸೂಲಿ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ವಸೂಲಿ ಮಾಡಿಕೊಡುವಂಥ ಕೆಲಸವನ್ನು ನಾನು ಕೇಳಿಲ್ಲ ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿಲ್ಲ. ಸರ್ಕಾರ ನೇರವಾಗಿ ಸತ್ತವರಿಗೆ ತಲಾ 5 ಲಕ್ಷ ರೂಪಾಯಿ, ಅಂಗವಿಕಲರಾದವರಿಗೆ 2 ಲಕ್ಷ ರೂಪಾಯಿ ಕೊಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತಿದ್ದೇನೆ. ಇದೆಲ್ಲಾ ಪುರಾಣ ಹೇಳಿಕೊಂಡು ಹೋಗುವುದರ ಬದಲಾಗಿ ಸರ್ಕಾರ ನೇರವಾಗಿ ನಾವು ಇಷ್ಟು ಹಣ ಕೊಡುತ್ತೇವೆಂದು ಹೇಳಬೇಕು. ಅವರು ಬಡವರಿದ್ದಾರೆ, ದುಡಿಯಲಾರದೆ ಬದುಕಲಾರದ ಪರಿಸ್ಥಿತಿಯಲ್ಲಿದ್ದಾರೆ. ಸತ್ತವರಿಗೆ ತಲಾ 5 ಲಕ್ಷ ರೂಪಾಯಿ ಕೊಡಲಿ. ಅಂಗವಿಕಲರಾದವರಿಗೆ ತಲಾ 2 ಲಕ್ಷ ರೂಪಾಯಿ ಕೊಡಲೆಂದು ಹೇಳಿ ನಾನು ಸರ್ಕಾರಕ್ಕೆ ನೇರವಾಗಿ ನಾನು ಪ್ರಶ್ನೆ ಮಾಡುತ್ತೇನೆ. ಅವರು ಸರಿಯಾಗಿ ಕೆಲಸ ಮಾಡಿಲ್ಲ. ಅವರು ಕಳಪೆ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನೆಲ್ಲಾ ನೀವು ಮೊದಲೇ ನೋಡಬೇಕಾಗಿತ್ತು. ಇದು ಒಂದು ವರ್ಷದ ನಂತರ ಹೇಳತಕ್ಕಂಥ

ಉತ್ತರವಲ್ಲ ಮತ್ತು ಸಮಂಜಸವಾದ ಉತ್ತರವಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಇವತ್ತು ಅನೌನ್ಸ್ ಮಾಡಬೇಕು.

ಶ್ರೀ ಬಿ. ಸತ್ಯನಾರಾಯಣ : ಮಾನ್ಯ ಸದಸ್ಯರ ಒತ್ತಾಯವೇನಿದೆ, ಆ ಒತ್ತಾಯದ ಬಗ್ಗೆ ನಾನು ಪಂಚಾಯತ್ ರಾಜ್ ಸಚಿವರ ಜೊತೆ ಚರ್ಚೆ ಮಾಡಿ, ಇನ್ನೂ ಹೆಚ್ಚಿನ ಕಾಂಪನ್‌ಸೇಷನ್ ಕೊಡಲಿಕ್ಕೆ ಲೋಕಾಯುಕ್ತರ ವಿಚಾರಣೆ ನೋಡಿಕೊಂಡು, ಅದರ ನಂತರ ಮಾಡಲು ಪ್ರಯತ್ನಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಇದು ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಳಗೆ ಬರತಕ್ಕಂಥದ್ದು ಇದ್ದು ಅವರೂ ಒಬ್ಬರು ಸಚಿವರು. ಇವತ್ತು ಸಚಿವರು ಉತ್ತರ ಹೇಳುತ್ತಾರೆಂದರೆ ಕರ್ನಾಟಕ ಸರ್ಕಾರ ಉತ್ತರ ಹೇಳುತ್ತದೆಂದರ್ಥ. ನಾನು ಅವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ, ಇವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಎಂದರೆ ಆಗುವುದಿಲ್ಲ. ಐ.ಎ.ಎಸ್. ಅಧಿಕಾರಿಗಳನ್ನು ಕೇಳಿದರೆ ಅವರು ದುಡ್ಡು ಕೊಡಬೇಡಿ ಎಂದು ಹೇಳುತ್ತಾರೆ. ನೀವು ಅವರ ಜೊತೆಯಲ್ಲಿ ಚರ್ಚೆ ಮಾಡಿ ಹೇಳುವುದಲ್ಲ ಇದು. ಇವತ್ತು ಸರ್ಕಾರ ನೇರವಾಗಿ ಈ ಸದನದಲ್ಲಿ ನಾವು ಇಷ್ಟು ಪರಿಹಾರ ಕೊಟ್ಟಿದ್ದೇವೆಂದು ಹೇಳಬೇಕಾಗುತ್ತದೆ. ಸತ್ತವರಿಗೆ 5 ಲಕ್ಷ ರೂಪಾಯಿ, ಅಂಗವಿಕಲರಾದವರಿಗೆ 2 ಲಕ್ಷ ರೂಪಾಯಿಗಳು ಇವತ್ತು ಕೊಡಬೇಕಾಗುತ್ತದೆ. ಅದಕ್ಕೆ ನಾನು ನೇರವಾಗಿ ಉತ್ತರ ಬಯಸುತ್ತೇನೆ, ಸಂಬಂಧಪಟ್ಟ ಇಲಾಖೆಗೆ ಅವರೇ ಮಂತ್ರಿಗಳು. ನೀರಿನ ವ್ಯವಸ್ಥೆಯನ್ನು ಅವರಿಗೇ ಕೊಟ್ಟಿದ್ದಾರೆ. ನೀರಿನ ಟ್ಯಾಂಕೇ ಕುಸಿದಿದೆ. ಇವರು ಇನ್ನು ಯಾರಿಗೆ ಕೇಳುವವರು? ಅದಕ್ಕೆ ದಯಮಾಡಿ ನೇರವಾಗಿ ಉತ್ತರ ಹೇಳಲಿ.

ಶ್ರೀ ಬಿ. ಸತ್ಯನಾರಾಯಣ : ನೀರಿನ ವ್ಯವಸ್ಥೆ, ನೀರು ಕೊಡುವುದು ನಮ್ಮ ಕೆಲಸ. ಅಲ್ಲಿ ಆಗಿರತಕ್ಕಂಥ ಕಟ್ಟಡ ಮತ್ತೆ ಕಾಂಪನ್‌ಸೇಷನ್ ಕೊಡುವುದು ಆರ್ ಡಿ ಪಿ ಆರ್ ಇಲಾಖೆಗೆ ಸಂಬಂಧಪಡುತ್ತದೆ. ಹಾಗಾಗಿ, ನಾನು ಅವರ ಹತ್ತಿರ ಚರ್ಚೆ ಮಾಡಿ, ಮಾತನಾಡಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಅವರು ಸರ್ಕಾರವಾಗಿ ಉತ್ತರ ಹೇಳಲಿ. ಇವತ್ತು ಈ ಸದನದಲ್ಲಿ ಹೇಳತಕ್ಕಂಥವರು ಸರ್ಕಾರ. ಸರ್ಕಾರವಾಗಿ ಉತ್ತರ ಹೇಳಲಿ. ನನಗೆ ಬರುವುದಿಲ್ಲ. ನಿಮಗೆ ಬರುವುದಿಲ್ಲವೆಂದು ಅವರು ಹೇಳುತ್ತಾರೆ. ಅದಲ್ಲ. ಈ ಸದನದಲ್ಲಿ ಹೇಳಬೇಕಾದರೆ ಕರ್ನಾಟಕ ಸರ್ಕಾರವೆಂದು ಉತ್ತರ ಹೇಳಬೇಕಾಗುತ್ತದೆ. ಅವರನ್ನು, ಇವರನ್ನು ಕೇಳಿ ಹೇಳ ಎತ್ತೇನೆಂದಲ್ಲ.

ದಯಮಾಡಿ ತಾವು ನೇರವಾಗಿ ಹೇಳಿ. ಕಾಂಪನ್‌ಸೇಷನ್ ಕೊಡುತ್ತೇನೆಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದಲ್ಲಿ ಒಂದು ನೂರು ಘಟನೆ ನಡೆದಿದ್ದರೆ ಒಂದು ಘಟನೆಯನ್ನು ಸರ್ಕಾರದ ಗಮನಕ್ಕೆ ತರುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ಒಂದು ವರ್ಷದ ನಂತರದ ಈ ಘಟನೆ ಬಗ್ಗೆ ಶಾಸಕರು ಪ್ರಶ್ನೆ ಎತ್ತಿದ್ದಾರೆ. ತಾವು ಈ ಉತ್ತರ ಕೊಡುವ ಮುಂಚೆ ಮಾನವೀಯತೆಯ ದೃಷ್ಟಿಯಿಂದ ಆ ಟ್ಯಾಂಕ್ ಬಿದ್ದು ಸತ್ತಾಗ, ನಾವು 25000 ರೂಪಾಯಿ ಕೊಡುತ್ತೇವೆಂದು ಹೇಳುವಂಥದ್ದು ಎಷ್ಟರಮಟ್ಟಿಗೆ ಸರಿ? ಸಮಾಲೋಚನೆ ಮಾಡುತ್ತೇವೆಂದು ಈಗ ನೀವೇನು ಹೇಳಿದಿರಲ್ಲಾ ಕಾರಜೋಳರವರು ಕೇಳಿದ ಮೇಲೆ ಸಮಾಲೋಚನೆ ಮಾಡುವುದು ಅಗತ್ಯವಿತ್ತೋ? ಪ್ರಶ್ನೆಹೇ ಉತ್ತರ ಕೊಡುವ ಮುಂಚೆಯೇ ಎಲ್ಲ ಸಮಾಲೋಚನೆ ಮಾಡಿ ಮ್ಯಾಗ್ನಿಮಮ್ ನನ್ನ ಚೌಕಟ್ಟಿನೊಳಗೆ ಇಷ್ಟು ಮಾಡುತ್ತಿದ್ದೇನೆ, ಇಷ್ಟು ನಾನು ಮಾಡಿದ್ದೇನೆ ಎಂದು ಹೇಳಬೇಕು. ಹಾಗಾದರೆ, ಯಾವ್ಯಾವ ರೀತಿ ಸತ್ತಾಗ ಎಷ್ಟೆಷ್ಟು ಕಾಂಪನ್‌ಸೇಷನ್ ನಿಗದಿ ಮಾಡುತ್ತೀರಾ? ಸತ್ತವನು ಸತ್ತ ತಾನೇ, ಅವನ ಮನೆ ಸರ್ವನಾಶವಾಯಿತು ತಾನೇ. ಆ ಬಡ ಕುಟುಂಬಕ್ಕೆ, ಇಡೀ ನಾಡಿನ ಜನತೆಗೆ ಒಂದು ಕೆಟ್ಟ ಮೆಸೇಜ್ ಹೋಗುತ್ತದೆ ಸಾರ್. ಈ ತರಹದ ಉತ್ತರಗಳಿಂದ ಒಳ್ಳೆಯದಾಗುವುದಿಲ್ಲ. ನೀವು ಹೇಳಿ. ಈಗಲೇ, ಈ ನಿಮಿಷಕ್ಕೆ ಕೊಡಿ ಎಂದು ನಾನು ಹೇಳುವುದಿಲ್ಲ. ಆದರೆ, ಸ್ಪಷ್ಟವಾಗಿ ನಾನು ಮಾಡುತ್ತೇನೆ, ಇನ್ನೊಂದು ಅಧಿವೇಶನ ಬರುವುದರೊಳಗಾಗಿ ಚರ್ಚೆ ಮಾಡಿ ಮ್ಯಾಗ್ನಿಮಮ್ ನಾನು ಹೆಲ್ಪ್ ಮಾಡುತ್ತೇನೆ ಎಂಬ ಈ ಮಾತು ನಿಮ್ಮಿಂದ ಬರಬೇಕೆಂದು ನಾವು ನಿರೀಕ್ಷೆ ಮಾಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣ : ಈಗಾಗಲೇ ಸ್ಪಷ್ಟವಾಗಿ ಹೇಳಿದಹಾಗೆ, ಇದೊಂದು Tortious liability ಎಂದು ಸರ್ಕಾರವಾದರೂ ತಿಳಿದುಕೊಂಡು, ಸರ್ಕಾರ ಕಟ್ಟಡ ಕಾಮಗಾರಿ ಸರಿ ಇಲ್ಲದೆ ಕಟ್ಟಡ ಕುಸಿದು ಬಿದ್ದಿರವುದರಿಂದ ಸಂಬಂಧಪಟ್ಟವರ ಮೇಲೆ ನಾವು ಕ್ರಮ ತೆಗೆದುಕೊಂಡು, ಹಣ ವಸೂಲಿ ಮಾಡಿ ತರಿಸಿಕೊಳ್ಳಬೇಕು. ಹಾಗಾಗಿ, ಸರ್ಕಾರವೇ ಇವತ್ತು ಅವರ ಗಮನಕ್ಕೆ ತಂದಮೇಲೆ ಸ್ವಇಚ್ಛೆಯಿಂದ ಇಷ್ಟು ಹಣ ಕೊಡುವುದಕ್ಕೆ ಮುಂದೆ ಬಂದಿದೆ. ಅದೇ ರೀತಿ, ಉದಾರವಾಗಿ ಇನ್ನೂ ಸಹ ಕನ್‌ಸಿಡರ್ ಮಾಡುವುದಕ್ಕೆ ಮಹದೇವಪ್ಪ, ನಾವು ಮಾತನಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೆ.....

ಉಪಾಧ್ಯಕ್ಷರು : ಒಂದೋ, ಎರಡೋ ಕ್ಲಾರಿಫಿಕೇಷನ್ ಕೇಳಿದಿರಿ. 2–3 ಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ವಸೂಲಿ ಮಾಡಿಕೊಟ್ಟರೆ.....

ಉಪಾಧ್ಯಕ್ಷರು : ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಗೋವಿಂದ ಎಂ. ಕಾರಜೋಳ : ನದಿಗೆ ಬಸ್ ಬಿದ್ದು ಸತ್ತರು, ಕೆನಾಲ್‌ಗೆ ಬಸ್ ಬಿದ್ದು ಸತ್ತರು, ಆ ಡ್ರೈವರ್ ಹಾಗೂ ಕಂಡಕ್ಟರ್ ಕಡೆಯಿಂದ ವಸೂಲು ಮಾಡಿ ಕೊಟ್ಟಿದ್ದೀರಾ ? ಇದು ಅಲ್ಲ ಉತ್ತರ. ಸರ್ಕಾರ ಎಂದ ಮೇಲೆ ನೀವು ಯಾರ ಕಡೆಯಿಂದ ವಸೂಲು ಮಾಡುತ್ತೀರೋ, ಯಾರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ ಅದು ನಮಗೆ ಸಂಬಂಧಪಟ್ಟಿದ್ದಲ್ಲ. ಬಡವರಿಗೆ ನೇರವಾಗಿ ಪರಿಹಾರವನ್ನು ನೀವು ಘೋಷಿಸಿ. ನೀವು ಅವರನ್ನು ಕೇಳಿ ಅವರಿಂದ ವಸೂಲಿ ಮಾಡಿ ಕೊಡುತ್ತೇವೆಂದರೆ ಏನು ಸ್ವಾಮಿ ಇದು. ಇದಕ್ಕೆ ಸರ್ಕಾರ ಎನ್ನುತ್ತಾರೆಯೇ? ಇದು ಸರ್ಕಾರದ ಉತ್ತರಾನಾ?

ಶ್ರೀ ಅರಗ ಜ್ಞಾನೇಂದ್ರ : ಮೊನ್ನೆ ತಾನೇ ಸುನಾಮಿಗೆ ಕೊಟ್ಟಿವಲ್ಲಾ ಅದಕ್ಕೆ ನಮಗೇನು ಕಾನೂನು ಅಡ್ಡಿ ಬಂತಾ? ಯಾರೋ ಬಡವರು ಅದು ನಿಮ್ಮ ಕೆಲಸ ಮಾಡುವಾಗ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ನೀರಿನ ಟ್ಯಾಂಕ್ ಕಟ್ಟುವಾಗ ಅದು ಕುಸಿದು ಬಿದ್ದು ಸತ್ತರು ಎಂದರೆ, ತಕ್ಷಣ ಸರ್ಕಾರ ಹೋಗಿ ಅವರಿಗೆ ಸಾಂತ್ವನ ಹೇಳುವಂಥ ಪ್ರಯತ್ನಗಳು ಆಗಬೇಕಲ್ಲವೇ? ಅವರಿಗೆ ಪರಿಹಾರಗಳನ್ನು ಕೊಡಬೇಕು. ಸುನಾಮಿಗೆ ಕೊಡಬೇಕಾದರೆ ಇಲ್ಲ, ಅದಕ್ಕೆ ಬರುವುದಿಲ್ಲ ಅದು ಸಮುದ್ರದಿಂದ ಆಗಿದೆ, ಅದಕ್ಕೆ ಬೇರೆಯವರು ನೋಡಿಕೊಳ್ಳಬೇಕೆಂದು ನಾವು ಯಾರಾದರೂ ಹೇಳಿದೆವಾ? ಇಲ್ಲವಲ್ಲಾ.

ಶ್ರೀ ಬಿ. ಸತ್ಯನಾರಾಯಣ : ಕೊಡುವುದಿಲ್ಲವೆಂದು ಹೇಳಲಿಲ್ಲ, ನಾನು ಎಷ್ಟು ಕೊಡಬೇಕೆಂದು ಚರ್ಚೆ ಮಾಡಿ ಹೇಳುತ್ತೇನೆಂದು ಹೇಳಿದೆ.

ಶ್ರೀ ಎನ್. ಯೋಗೀಶ್ ಭಟ್ : ಹೆಲಿಕ್ಯಾಪ್ಟರ್‌ನಲ್ಲಿ ಬಂದು ಎರಡು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದಾರೆ.

(ಈ) ವಿಷಯ: ರಾಜ್ಯದಲ್ಲಿರುವ ಕುದುರೆಮುಖ ಕಬ್ಬಿಣ ಅದಿರು ಕಂಪನಿಯಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರುವುದರಿಂದ ಅದನ್ನು ಮುಚ್ಚದೆ ಉಳಿಸಿಕೊಳ್ಳುವ ಬಗ್ಗೆ.